**ದಿನಾಂಕಃ 01.03.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದ**

ನಾನು 9 ನೇ ತರಗತಿವರೆಗೂ ವಿದ್ಯಭ್ಯಾಸ ಮಾಡಿರುತ್ತೇನೆ. ದಿಃ 19.03.2015 ರಂದು ನನ್ನ ತಂದೆಯವರು ತೀರಿಕೊಂಡಿರುತ್ತಾರೆ. ದಾವಾಸ್ವತ್ತಿನ ಸರ್ವೇ ಸಂಖ್ಯೆ 12 ಆಗಿರುತ್ತದೆ ಹಾಗೂ ಅದರ ವಿಸ್ತೀರ್ಣ 17 ಗುಂಟೆ ಆಗಿರುತ್ತದೆ. ದಾವೆಯನ್ನು ಭಾಗಾಂಶ ಕೋರಿ ಹೂಡಿರುತ್ತೇನೆ. ದಾವಾ ಸ್ವತ್ತಿನ 17 ಗುಂಟೆಯ ಜಾಗದಲ್ಲಿ ಸಂಪೂರ್ಣ ಜಾಗ ಬರಬೇಕೆಂದು ಕೋರಿ ಹೂಡಿರುವುದಿಲ್ಲ ಎಂದರೆ ಸರಿ. 1 ನೇ ಪ್ರತಿವಾದಿ ನನ್ನ ತಾಯಿ, 2 ನೇ ಪ್ರತಿವಾದಿ ನನ್ನ ಅಕ್ಕ. ನನ್ನ ವಾದ ಪತ್ರದಲ್ಲಿ ತೋರಿಸಿರುವ ವಿಳಾಸದಲ್ಲಿ 2 ನೇ ಪ್ರತಿವಾದಿಯು ವಾಸಿಸುತ್ತಿದ್ದಾರೆ ಎಂದು ಹೇಳಿರುತ್ತೇನೆ ಎಂದರೆ ಸರಿ. 2 ನೇ ಪ್ರತಿವಾದಿಗೆ ಮದುವೆಯಾಗಿರುತ್ತದೆ ಎಂದರೆ ಸರಿ. ಮದುವೆಯ ನಂತರ ಅವರು ಅವರ ಗಂಡನ ಮನೆಯಲ್ಲಿ ವಾಸಿಸುತ್ತಿದ್ದಾರೆ ಎಂದರೆ ಸರಿ. ಅವರು ಹೊಸಪಾಳ್ಯ, ಹೂರ್ಡಿಗೆರೆ ಹೋಬಳಿ, ತುಮಕೂರಿನಲ್ಲಿ ವಾಸಿಸುತ್ತಿದ್ದಾರೆ. 2 ನೇ ಪ್ರತಿವಾದಿಯವರು ಹೊಸಪಾಳ್ಯ, ಹೂರ್ಡಿಗೆರೆ ಹೋಬಳಿ, ತುಮಕೂರಿನಲ್ಲಿ ವಾಸವಿದ್ದರೂ ಸಹ 2 ನೇ ಪ್ರತಿವಾದಿಯು ಕತ್ತಿಹೊಸಹಳ್ಳಿಯಲ್ಲಿ ವಾಸಿಸುತ್ತಾರೆ ಎಂದು ಸುಳ್ಳು ಮಾಹಿತಿಯನ್ನು ಸಲ್ಲಿಸಿ ಸುಳ್ಳು ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಕತ್ತಿಹೊಸಹಳ್ಳಿಯಲ್ಲಿ ನನಗೆ ಒಂದೇ ಮನೆ ಇರುತ್ತದೆ ಎಂದರೆ ಸರಿ. ಸಾಕ್ಷಿಗೆ ನಿಪಿ-10 ನ್ನು ತೋರಿಸಲಾಗಿ ಅದರಲ್ಲಿರುವ 3 ನೇ ಕ್ರಮಾಂಕದಲ್ಲಿ ತೋರಿಸಿದಂತೆ ಸರ್ವೇ ನಂ. 12 ಅದರಲ್ಲಿ 0.01 ಗುಂಟೆ ಜಾಗವನ್ನು ಕೆ.ಮಂಜುನಾಥ್‌ರವರಿಗೆ ಮಾರಾಟ ಮಾಡಲಾಗಿರುತ್ತದೆ ಎಂದು ನಮೂದು ಇರುತ್ತದೆ ಎಂದರೆ ಮಾರಾಟ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ ಹಾಗೂ ಕ್ರಮಾಂಕ 4 ರಲ್ಲಿ ತೋರಿಸಿದಂತೆ ಶಂಕರಾಚಾರ್ ಬಿನ್ ವೆಂಕಟರಾಮಾಚಾರ್ ರವರಿಗೆ 0.02 ಗುಂಟೆ ಜಾಗವನ್ನು ಆಶಾರಾಣಿ, ಕೆ.ಪಿ. ಹನುಮಂತರಾಜು ಮತ್ತು ಇತರರು ಮಾರಾಟ ಮಾಡಿರುತ್ತಾರೆ ಎಂದರೆ ಸರಿ ಹಾಗೂ ಕ್ರಮಾಂಕ 5 ರಲ್ಲಿ ತೋರಿಸಿದಂತೆಯೂ ಸಹ ಸರ್ವೇ ನಂ.

12 ರ ಜಾಗವನ್ನು ಈಗಾಗಲೇ ಬೇರೆಯವರ ಹೆಸರಿನಲ್ಲಿ ಮಾರಾಟ ಆಗಿರುತ್ತದೆ ಎಂದರೆ ಗೊತ್ತಿಲ್ಲ. ನಿಪಿ-10 ರಲ್ಲಿ ಕಂಡುಬರುವಂತೆ ದಾವಾಸ್ವತ್ತನ್ನು ಬೇರೆಯವರಿಗೆ ಮಾರಾಟ ಮಾಡಿದ್ದು, ಅದನ್ನು ಪ್ರಸ್ತುತ ದಾವೆಯಲ್ಲಿ ಪ್ರಶ್ನಿಸಿರುವುದಿಲ್ಲ ಎಂದರೆ ಸರಿಯಲ್ಲ.

ನಾನು ಹಾಕಿರುವ ದಾವೆಯಲ್ಲಿ 0.01.08 ಗುಂಟೆ ಜಾಗವನ್ನು ಹೊರತುಪಡಿಸಿ ಬೇರೆ ಯಾವುದೇ ಉಳಿದ ಜಾಗಕ್ಕೆ ದಾವೆಯನ್ನು ಹಾಕಿರುವುದಿಲ್ಲ ಎಂದರೆ ಸರಿ. ನಿಪಿ-10 ರಲ್ಲಿ ಹೇಳಿರುವ ಆಶಾರಾಣಿಯವರು ನನ್ನ ಅಕ್ಕ ಮತ್ತು ಹನುಮಂತರಾಜು ನನ್ನ ತಂದೆ ಹಾಗೂ ಲಕ್ಷಮ್ಮರವರು ನನ್ನ ತಾಯಿ ಎಂದರೆ ಸರಿ. ನಿಪಿ-10 ರಲ್ಲಿರವರು ಮಹೇಶ ಬಿನ್ ಹನುಮಂತರಾಜು ನಾನೇ ಆಗಿರುತ್ತೇನೆ. ನಿಪಿ-10 ರಂತೆ ನಾನು ಹಾಗೂ ನನ್ನ ತಾಯಿ, ಅಕ್ಕ ಮತ್ತು ತಂದೆಯವರು ದಾವಾಸ್ವತ್ತನ್ನು ಬೇರೆಯವರಿಗೆ ಮಾರಾಟ ಮಾಡಿರುತ್ತೇವೆ ಎಂದರೆ ಸಾಕ್ಷಿಯು ಉತ್ತರಿಸಿರುವುದಿಲ್ಲ.

ದಾಖಲೆಗಳಿಗೆ ಸಹಿ ಮಾಡುವ ಮುನ್ನ ಓದಿ, ತಿಳಿದುಕೊಂಡು ಸಹಿಯನ್ನು ಮಾಡುತ್ತೇನೆ. ನಿಪಿ-5 ರಲ್ಲಿರುವ ಸಹಿ ಹಾಗೂ ಹೆಬ್ಬಟ್ಟಿನ ಗುರುತು ನನ್ನದಲ್ಲ. ವಾದ ಪತ್ರದಲ್ಲಿರುವ ಸಹಿ ನನ್ನದೇ ಆಗಿರುತ್ತದೆ. ನಿಪಿ-5 ನ್ನು ನಾನು ಹಾಗೂ ನನ್ನ ತಂದೆ, ತಾಯಿ ಮತ್ತು ಅಕ್ಕರವರು ಲಕ್ಷ್ಮೀ ಎನ್ನುವವರ ಹೆಸರಿಗೆ ಬರೆಯಿಸಿ ಉಪನೋಂದಣಾಧಿಕಾರಿಗಳ ಕಛೇರಿಯಲ್ಲಿ ನೋಂದಣಿಯನ್ನು ಸಹ ಮಾಡಿಸಿರುತ್ತೇವೆ ಎಂದರೆ ಸರಿಯಲ್ಲ. ಉಪನೋಂದಣಾಧಿಕಾರಿಗಳ ಕಛೇರಿಗೆ ನನ್ನ ತಂದೆ, ತಾಯಿ ಹಾಗೂ ಅಕ್ಕ ಹೋಗಿರುವ ಬಗ್ಗೆ ನನಗೆ ಗೊತ್ತಿಲ್ಲ. ನಿಪಿ-5 ರ ಬಗ್ಗೆ ನನಗೆ 2014 ರಲ್ಲಿ ಗೊತ್ತಾಗಿರುತ್ತದೆ. ನಿಪಿ-5 ರ ಬಗ್ಗೆ 2014 ರಲ್ಲಿ ಗೊತ್ತಾಗಿದ್ದರೂ ಸಹ ನನ್ನ ದಾವೆಯಲ್ಲಿ ಸದರಿ ದಾಖಲೆಯನ್ನು ಪ್ರಶ್ನಿಸಿರುವುದಿಲ್ಲ. ನಾನು ದಿಃ 25.11.1995 ರಲ್ಲಿ ಜನಿಸಿರುತ್ತೇನೆ. 2014 ರಲ್ಲಿ ನನಗೆ 18 ವರ್ಷ ವಯಸ್ಸಾಗಿರುತ್ತದೆ. ನಿಪಿ-3 ರಲ್ಲಿ ಕೆ.ಆರ್.ಶಿವಗಂಗಯ್ಯ ಮತ್ತು ಕೆ.ಆರ್.ಶಶಿಕಲಾರವರ

ಹೆಸರಿಗೆ ಜೆ.ಪಿ.ಎ.ನ್ನು ನಾನು ಹಾಗೂ ನನ್ನ ತಂದೆ, ತಾಯಿ ಮತ್ತು ಅಕ್ಕರವರು ಮಾಡಿಕೊಟ್ಟಿರುತ್ತೇವೆ ಎಂದರೆ ಸರಿ.

ದಾವಾಸ್ವತ್ತಿನ ಚೆಕ್ಕುಬಂಧಿ ಪೂರ್ವಕ್ಕೆ ಸರ್ಕಾರಿ ಮತ್ತು ಚೆನ್ನಹನುಮಯ್ಯರವರ ಜಮೀನು, ಪಶ್ಚಿಮಕ್ಕೆ ಪೂಜಹನುಮಯ್ಯರವರ ಮನೆ, ಉತ್ತರಕ್ಕೆ ಕೆ.ಆರ್.ಗಂಗಣ್ಣ ಮತ್ತು ರಾಮಯ್ಯರವರ ಜಮೀನು, ದಕ್ಷಿಣಕ್ಕೆ ಮುನಿರಾಜುರವರ ಜಮೀನು. ನಿಪಿ-3 ಮತ್ತು 5 ರಲ್ಲಿಯೂ ಸಹ ಇದೇ ಚೆಕ್ಕುಬಂಧಿ ಇರುತ್ತದೆ ಎಂದರೆ ಸರಿ. ನಿಪಿ-4 ನ್ನು ನಾನು ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸಿರುವುದಿಲ್ಲ ಎಂದರೆ ಸರಿ. ನಿಪಿ-5 ರಲ್ಲಿರುವ ಸಹಿ ನನ್ನದಲ್ಲ ಎಂದು ನಾನು ಯಾವುದೇ ಠಾಣೆಯಲ್ಲಿ ನನ್ನ ತಂದೆ, ತಾಯಿ ಹಾಗೂ ಅಕ್ಕರವರ ವಿರುದ್ಧ ದೂರನ್ನು ದಾಖಲಿಸಿರುವುದಿಲ್ಲ ಹಾಗೂ ದಾಖಲಿಸಲು ತೊಂದರೆ ಇರಲಿಲ್ಲ ಎಂದು ನುಡಿಯುತ್ತಾರೆ. ನಿಪಿ-5 ರಲ್ಲಿರುವ ನನ್ನ ಹೆಬ್ಬಟ್ಟು ಮತ್ತು ಛಾಯಾಚಿತ್ರವನ್ನು ನಕಲಿ ತಯಾರಿಸಿಕೊಂಡಿರುತ್ತಾರೆ. ನಿಪಿ-10 ರ ಕಲಂ. 14 ರಲ್ಲಿ ಪ್ರತಿವಾದಿಗಳ ಹೆಸರು ನಮೂದು ಆಗಿರುತ್ತದೆ ಎಂದರೆ ಸರಿಯಲ್ಲ. ದಾವಾಸ್ವತ್ತಿನಲ್ಲಿ ಪ್ರತಿವಾದಿಗಳು ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿಯಲ್ಲ. ನಿಪಿ-5 ರಲ್ಲಿರುವ ಸಹಿ ನನ್ನದಲ್ಲ ಎಂದು ತೋರಿಸಲು ಯಾವುದೇ ಪೂರಕ ದಾಖಲೆಗಳನ್ನು ಹಾಜರುಪಡಿಸಿಲ್ಲ. ನಿಪಿ-10 ರಲ್ಲಿ ತೋರಿಸಿರುವ ಪ್ರತಿವಾದಿಗಳು ಅವರ ಭಾಗಕ್ಕೆ ಬಂದ ಜಾಗಕ್ಕೆ ಕಂದಾಯವನ್ನು ಅವರೇ ಕಟ್ಟಿಕೊಂಡು ಹೋಗುತ್ತಿದ್ದಾರೆ ಎಂದರೆ ಸರಿಯಲ್ಲ. ನಾನು ಮತ್ತು 1 ನೇ ಪ್ರತಿವಾದಿಯು ಒಂದೇ ಮನೆಯಲ್ಲಿ ವಾಸಿಸುತ್ತಿದ್ದೇವೆ ಎಂದರೆ ಸರಿಯಲ್ಲ. ದಾವಾಸ್ವತ್ತಿನಲ್ಲಿ ಒಟ್ಟು 17 ಗುಂಟೆ ಜಾಗ ಇದ್ದು ಬೇರೆ ಯಾರ ವಿರುದ್ಧವೂ ದಾವೆಯನ್ನು ಸಲ್ಲಿಸದೇ ಪ್ರತಿವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಮಧ್ಯಾಹ್ನದ ಊಟದ ಸಮಯವಾಗಿದ್ದರಿಂದ ಮುಂದೂವರೆದ ಪಾಟೀ ಸವಾಲನ್ನು ಊಟದ ಸಮಯದ ನಂತರ ಮುಂದುವರೆಸಲು ಮುಂದೂಡಲಾಯಿತು.**

**ದಿನಾಂಕಃ 01.03.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದ**

ನಿಪಿ-4 ಮತ್ತು 6 ಎರಡೂ ಒಂದೇ ಆಗಿರುತ್ತದೆ ಎಂದರೆ ಸರಿ. ದಾವಾ ಸಂಖ್ಯೆ 2/2017 ನ್ನು ಮುನಿರಾಜುರವರು ನನ್ನ ಅಕ್ಕನ ವಿರುದ್ಧ ಸಲ್ಲಿಸಿರುತ್ತಾರೆ ಎಂದರೆ ಸರಿ. ಸದರಿ ದಾವೆಯಲ್ಲಿ ನಾವು ಒಬ್ಬರೇ ವಕೀಲರನ್ನು ನೇಮಕ ಮಾಡಿಕೊಂಡು ಅವರ ಮೂಲಕ ಪ್ರತಿವಾದಿ ಪತ್ರವನ್ನು ಸಲ್ಲಿಸಿರುತ್ತೇವೆ ಎಂದರೆ ಸರಿ. ಓ.ಎಸ್ 3/2017 ನ್ನು ಗಂಗಮ್ಮರವರು 1 ನೇ ಮತ್ತು 2 ನೇ ಪ್ರತಿವಾದಿಗಳು ಮತ್ತು ನನ್ನ ವಿರುದ್ಧ ಹೂಡಿರುತ್ತಾರೆ ಎಂದರೆ ಸರಿ. ಸದರಿ ದಾವೆಯಲ್ಲಿರುವ ದಾವಾ ಸ್ವತ್ತಿನ ಸರ್ವೇ ನಂ.12 ಹಗೂ ಈ ದಾವಾ ಸ್ವತ್ತಿನ ಸರ್ವೇ ನಂಬರ್ ಒಂದೇ ಆಗಿರುತ್ತದೆ ಎಂದರೆ ಸರಿ. ನಿಪಿ-1 ನ್ನು 1 ನೇ ಪ್ರತಿವಾದಿಯು ಮಾಡಿದ್ದು, ಅದನ್ನು ನಾನು ಸಲ್ಲಿಸಿರುತ್ತೇನೆ ಎಂದರೆ ಸರಿ. ನಾನು ಮತ್ತು 1 ನೇ ಹಾಗೂ 2 ನೇ ಪ್ರತಿವಾದಿಯು ಚೆನ್ನಾಗಿರುವ ಕಾರಣಕ್ಕೆ ನಿಪಿ-1 ನ್ನು ನಾನು ತಂದು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ನಾವು ಚೆನ್ನಾಗಿಲ್ಲ ಎಂದು ನುಡಿಯುತ್ತಾರೆ. ನಿಪಿ-5 ನ್ನು ಬರೆದುಕೊಟ್ಟು ಅದಕ್ಕೆ ರೂ. 35,000/-ಗಳನ್ನು ಸ್ವೀಕರಿಸಿ ನಂತರವೂ ಸಹ ಸದರಿ ದಾಖಲೆಯನ್ನು ಮಾಡಿಕೊಟ್ಟಿರುವುದಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

**(ನನ್ನ ಉಕ್ತಲೇಖನ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಇದೆ**

**2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,**
**ದೊಡ್ಡಬಳ್ಳಾಪುರ.**